<u>ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ</u>
<u>ಸಾಃ ಗೋಕಾಕ</u>
<u>ಸಿಸಿ ನಂಬರಃ **1003/2018**</u>

ಆರೋಪಿತನ ಹೆಸರು 1. ಗುಲಾಬಸಾಬ ಮೀರಾಸಾಬ ಮುಲ್ತಾನಿ
ಸಾಃ ಕೌಜಲಗಿ ಗ್ರಾಮ ಗೋಕಾಕ

2. ಮುಬಾರಕ ಶಿಕಂದರ ಮುಲ್ತಾನಿ
ಸಾಃ ಕೌಜಲಗಿ ಗ್ರಾಮ ತಾಃ ಗೋಕಾಕ.

<u>ಆಪಾದನೆ</u>

ದಿನಾಂಕ **13/04/2017** ರಂದು **09ಃ30** ಗಂಟೆ ಸುಮಾರಿಗೆ ಕುಲಗೋಡ ಪೋಲೀಸ ಠಾಣಾ ಹದ್ದಿ ಪೈಕಿ ಕೌಜಲಗಿ ಗ್ರಾಮದ ಅಂಬೇಡ್ಕರ ಸರ್ಕಲ ಹತ್ತಿರ ಉಸ್ಮಾನ ಮಕಾನದಾರ ಇವರ ಗಾರೇಜ ಮುಂದುಗಡೆ ಕಳ್ಳಿಗುದ್ದಿ ಸರ್ಕಲ ಕಡೆಯಿಂದ ಅಂಬೇಡ್ಕರ ಸರ್ಕಲ ಕಡೆಗೆ ಹೋದ ಸಾರ್ವಜನಿಕ ಡಾಂಬರ ರಸ್ತೆಯ ಮೇಲೆ ಆರೋಪಿ ನಂ**1** ಈತನು ತಾನು ನಡೆಸುತ್ತಿದ್ದ ಬಜಾಜ ವಿಕ್ರಾಂತ ಮೋಟಾರ ಸೈಕಲ ನಂ ಕೆಎ **49**/ಯು **5724** ನೇದ್ದನ್ನು ಜೋರಿನಿಂದ ದುಡುಕಿನಿಂದ ಮತ್ತು ನಿರ್ಲಕ್ಷ್ಯತನದಿಂದ ನಡೆಸುತ್ತಾ ಬಂದು ಸುದಾಕರ ಚೌಕಾ ಈತನು ಟಿವಿಎಸ ಅಪ್ಪಾಚಿ ಮೋಟಾರ ಸೈಕಲ ಟೆಂಪರರಿ ನಂ ಎಮ ಎಚ **10**/ಟಿಎಮಿ **2017/557** ನೇದನ್ನು ಕಳ್ಳಿಗುದ್ದಿ ಸರ್ಕಲ ಕಡೆಯಿಂದ ಅಂಬೇಡ್ಕರ ಸರ್ಕಲ ಕಡೆಗೆ ನಿದಾನವಾಗಿ ಹೋಗುವಾಗ ಅಕಸ್ಮಾತ ಜೋಲಿ ಹೋಗಿ ಮೋಟಾರ ಸೈಕಲ ಸಮೇತ ಕೆಳಗೆ ಬೀಳಲು ಅದೇ ವೇಳೆಗೆ ಆರೋಪಿ ನಂ**1** ಈತನು ತನ್ನ ವಾಹನವನ್ನು ಅವನಿಗೆ ಹಾಯಿಸಿ ಅಪಘಾತ ಮಾಡಿ ಕಲಂ **279** ಐಪಿಸಿ ನೇದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿರುವನು.

ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂದಪಟ್ಟಂತೆ ಆರೋಪಿ ನಂ**1** ಈತನು ತಾನು ನಡೆಸುತ್ತಿದ್ದ ಬಜಾಜ ವಿಕ್ರಾಂತ ಮೋಟಾರ ಸೈಕಲ ನಂ ಕೆಎ **49**/ಯು **5724** ನೇದ್ದನ್ನು ಸುದಾಕರ ಚೌಕಾ ಈತನಿಗೆ ಅಪಘಾತ ಮಾಡಿ ಅವನು ಆಸ್ಪತ್ರೆಯಲ್ಲಿ ಉಪಚಾರ ಹೊಂದುವಾಗ ನಿಧನ ಹೊಂದಿದ್ದು ಕಲಂ **304** ಐಪಿಸಿ ನೇದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿರುವನು.

ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂದಪಟ್ಟಂತೆ ಆರೋಪಿ ನಂ**1** ಈತನು ವಾಹನ ಅಪಘಾತ ಮಾಡಿ ಸದರಿ ವಿಷಯವನ್ನು ಪೋಲೀಸ ಠಾಣೆಗೆ ತಿಳಿಸದೆ ಒಡಿ ಹೋಗಿ ಕಲಂ **134** ಸಹಕಲಂ **187** ಎಮ ವಿಆಕ್ಟ ನೇದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿರುವನು.

ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂದಪಟ್ಟಂತೆ ಆರೋಪಿ ನಂ**1** ಈತನು ವಾಹನ ನಡೆಸಲು ಢ್ರಾಯವಿಂಗ ಲೈಸೆನ್ಸ ಹೊಂದದೇ ವಾಹನ ನಡಸೆಸಿ ಅಪರಾದ ಕಲಂ **3** ಸಹಕಲಂ **181** ಎಮ ವಿ ಆಕ್ಟ ಅಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿರುವನು.

ಮೇಲೆ ಹೇಳಿದ ದಿನಾಂಕ ಮತ್ತು ವೇಳೆಯಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂದಪಟ್ಟಂತೆ ಆರೋಪಿ ನಂ**2** ಈತನು ಆರೋಪಿ ನಂ**1** ಇವನಿಗೆ ಮೋಟಾರ ಸೈಕಲ ನಡಸೆಲು ಢ್ರಾಯವಿಂಗ ಲೈಸೆನ್ಸ ಇಲ್ಲದಿದ್ದರೂ ಮೇಲೆ ನಮೂದಿಸಿದ ದಿನಾಂಕ ವೇಳೆ ತನ್ನ ವಾಹನವನ್ನು ನಡೆಸಲಿಕ್ಕೆ ಕೊಟ್ಟು ಅಪರಾದ ಕಲಂ **5** ಸಹಕಲಂ **180** ಎಮ ವಿ ಆಕ್ಟ ರಡಿಯಲ್ಲಿ ಶಿಕ್ಷಾರ್ಹ ಅಪರಾದ ಮಾಡಿರುವನು.

ಸದರಿ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

ಪ್ರಃ **1** ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ**?**

ಪ್ರಃ **2** ನೀವು ಗುನ್ನಾ ಕಬೂಲಿ ಆಗುವಿರೋ ಅಥವಾ ವಿಚಾರಣೆ ಆಗಬೇಕೋ**?**

(ಮೇಲಿನ ಆಪಾದನೆಯನ್ನು ಆರೋಪಿತನಿಗೆ ಓದಿ ಹೇಳಿ ಅವರಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರಕೊಂಡೆ ಅಂತಾ ದೃಢೀಕರಿಸುತ್ತೇನೆ)

ಸ್ಥಳಃ ಗೋಕಾಕ
ದಿಃ **06-10-2023**                                        ಹೆ.ದಿ.ನ್ಯಾ.ದಂ., ಗೋಕಾಕ